ಎಸ್‌ಜಿಎಸ್‌ವೈ ಗಳಿಗೆ ಸಹ ಈ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ನೀಡಲಾಗಿದೆ.

ಇದಲ್ಲದೆ ಮಾಹಿತಿ ತಂತ್ರಜ್ಞಾನ ಇಲಾಖೆಯ ಅಧಿಕಾರಿಗಳಿಗೆ ತಲಾ ಎರಡು ಜಿಲ್ಲೆಗಳಂತೆ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ವಹಿಸಲಾಗಿದೆ.

ಕೊರಟಗೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಯೋಜನಾ ಇಲಾಖಾವತಿಯಿಂದ ಅಭಿವೃದ್ಧಿ ಕಾರ್ಯ

1213 (714) ಶ್ರೀ ಸಿ.ಚೆನ್ನಿಗಪ್ಪ(ಕೊರಟಗೆರೆ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಿಂದ ಕೊರಟಗೆರೆ ತಾಲ್ಲೂಕಿನ ಕ್ಷೇತ್ರ ವ್ಯಾಪ್ತಿಯಲ್ಲಿ ಯೋಜನಾ ಇಲಾಖಾ ವತಿಯಿಂದ ಯಾವ ಯಾವ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿದೆ?

ಆ) ಇದಕ್ಕೆ ಬಿಡುಗಡೆ ಮಾಡಿರುವ ಅನುದಾನವೆಷ್ಟು?

ಶ್ರೀ ಆರ್.ಬಿ. ತಿಮ್ಮಾಪುರ್(ಯೋಜನಾ ಸಚಿವರು):

ಅ) ಯೋಜನಾ ಇಲಾಖೆಯ ಕೊರಟಗೆರೆ ಕ್ಷೇತ್ರಕ್ಕೆ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಾಗೂ ಕರ್ನಾಟಕ ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆಯಿಂದ ಹಣವನ್ನು ಬಿಡುಗಡೆ ಮಾಡುತ್ತಿದೆ. ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿವತಿಯಿಂದ ಜಿಕೆ ಡ್ಯಾಂ, ಕೆರೆ ಅಭಿವೃದ್ಧಿ, ಚ್ಯಾನಲ್ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ.

ಆ)

		ಬಿಡುಗಡೆ ಮಾಡಿದ ಹಣ ಲಕ್ಷ ರೂ.ಗಳು
ಬಯಲು ಸೀಮೆ ಅಬಿವೃದ್ಧಿ ಮಂಡಳಿ	-	13.49
ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ	-	25.00

ಬೈಂದೂರು-ಗಂಗನಾಡು-ಕಾರ್ನಿ ರಸ್ತೆಯ ನಿರ್ಮಾಣ

1215(722) ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೈಂದೂರಿನಿಂದ ಸಾಗರಕ್ಕೆ ಬೈಂದೂರು-ಗಂಗನಾಡು-ಕಾರ್ನಿ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ 1999ರಲ್ಲಿ ಉಡುಪಿ ವಿಭಾಗದ ಲೋಕೋಪಯೋಗಿ ಇಲಾಖೆಯವರು ಪ್ರಸ್ತಾವನೆಯನ್ನು ಅರಣ್ಯ ಇಲಾಖೆಯ ಅನುಮೋದನೆಗಾಗಿ ಕಳುಹಿಸಿರುವುದು ನಿಜವೇನು?

ಆ) ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಲುವೇನು?

ಇ) ಸದರಿ ರಸ್ತೆ ನಿರ್ಮಾಣಗೊಂಡು ಬೈಂದೂರಿನಿಂದ ಸಾಗರಕ್ಕೆ ಬಹಳ ಹತ್ತಿರದಲ್ಲಿ ಸಂಪರ್ಕ ಸಾಧ್ಯವಾಗುವುದರಿಂದ ವಿಳಂಬ ಮಾಡದೇ ಅರಣ್ಯ ಇಲಾಖೆಯು ತನ್ನ ಅನುಮೋದನೆ ನೀಡುವುದೇ?

ಈ) ಜಿಲ್ಲೆಗಳ ಜನತೆಗೆ ಅನುಕೂಲವಾಗುವ ಈ ಯೋಜನೆಗೆ ಇಲಾಖೆ ಸ್ಪಂದಿಸಲಾಗದೆ ಇರುವ ಕಾರಣಗಳೇನು?

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಬೈಂದೂರಿನಿಂದ ಸಾಗರಕ್ಕೆ ಬೈಂದೂರು-ಗಂಗನಾಡು-ಕಾರ್ನಿ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಬಂದಿರುವುದು ನಿಜ. ಪ್ರಸ್ತಾಪಿತ ರಸ್ತೆಯ ನಕಾಶೆ, ಹಾದುಹೋಗುವ ಸ್ಥಳದ ವಿವರ, ರಸ್ತೆಯ ಉದ್ದ, ಅಗಲಗಳು ಇತ್ಯಾದಿ ವಿವರಗಳನ್ನು ಮುಂದಿನ ಕ್ರಮ ಕೈಗೊಳ್ಳುವರೇ ಒದಗಿಸಿಕೊಡುವಂತೆ ಲೋಕೋಪಯೋಗಿ ಇಲಾಖೆ, ಕುಂದಾಪುರ ಉಪ ವಿಬಾಗ ಇವರನ್ನು ಕೋರಲಾಗಿದೆ. ಸದರಿ ಇಲಾಖೆಯಿಂದ ಮಾಹಿತಿ ಸ್ವೀಕೃತಿಯಾದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಆ) ಲೋಕೋಪಯೋಗಿ ಇಲಾಖೆಯಿಂದ ಪ್ರಸ್ತಾಪಿತ ರಸ್ತೆಯ ನಕಾಶೆ, ಹಾದುಹೋಗುವ ಸ್ಥಳದ ವಿವರ, ರಸ್ತೆಯ ಉದ್ದ ಹಾಗೂ ಅಗಲಗಳು ಇತ್ಯಾದಿ ವಿವರಗಳು ಅರಣ್ಯ ಇಲಾಖೆಗೆ ದೊರೆತ ನಂತರವೇ ಈ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿದೆ.

ಇ) ಅರಣ್ಯ ಸಂರಕ್ಷಣಾ ಕಾಯ್ದೆ 1980 ರನ್ವಯ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಲು ಲೋಕೋಪಯೋಗಿ ಇಲಾಖೆಯಿಂದ ವಿವರಗಳು ಬಂದ ಕೂಡಲೇ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಅನ್ವಯಿಸುವುದಿಲ್ಲ.

ಮರವಂತೆ ಕಡಲ ತೀರಕ್ಕೆ ಹೊನಲು ಬೆಳಕಿನ ವ್ಯವಸ್ಥೆ

1216(723) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮರವಂತೆ ಕಡಲ ತೀರಕ್ಕೆ ಹೊನಲು ಬೆಳಕಿನ ವ್ಯವಸ್ಥೆಗಾಗಿ ಕೇಂದ್ರ ಸರ್ಕಾರದಿಂದ ಮಂಜೂರಾತಿಯಾದ ಮೊಬಲಗು ಎಷ್ಟು?

ಆ) ಈ ಸಂಬಂಧವಾಗಿ ಟೆಂಡರನ್ನು ಕರೆಯಲಾಗಿದೆಯೇ; ಇಲ್ಲವಾದಲ್ಲಿ, ಯಾವಾಗ ಕರೆಯಲಾಗುವುದು?

ಇ) ಈ ಸಂಬಂಧದಲ್ಲಿ ರಾಜ್ಯ ಸರ್ಕಾರದ ಪಾತ್ರವೇನು?

ಈ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ರೂ. 29.54 ಲಕ್ಷಗಳು

ಆ) ಇಲ್ಲ - No

ಈ ಕಾಮಗಾರಿಯನ್ನು ತೋಟಗಾರಿಕೆ ಇಲಾಖೆಯ ಅಧೀನದ ಒಂದು ಸಂಸ್ಥೆಯಿಂದ ಮಾಡಿಸಿಕೊಳ್ಳಲಾಗುತ್ತಿದೆ.

ಇ) ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲು ರೂ. 10.60 ಲಕ್ಷಗಳು, ಕಾಮಗಾರಿ ಮುಗಿಸಲು ಉಸ್ತುವಾರಿಯನ್ನು ವಹಿಸಿದೆ.

ಈ) ಕೆಲಸ ಪ್ರಗತಿಯಲ್ಲಿದೆ.